4

# ಬಾಪ್ತಿಸ್ಮದಲ್ಲಿ ಸಂಭವಿಸುವ ಬದಲಾವಣೆಗಳು

*"ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲ್ಪಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ" (ರೋಮಾಪುರ 6:17, 18).*

ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುತ್ತಿರುವಾಗ, ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಆತ್ಮಿಕ ವಾಸ್ತವಿಕತೆಗಳನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. ನಾವು ಬಾಪ್ತಿಸ್ಮ ಹೊಂದಿಕೊಳ್ಳುವಾಗ ನಾವು ಹೃದಯದಿಂದ ಆತ್ಮಿಕವಾಗಿ ಒಳಗೊಂಡಿದ್ದರೆ, ನಾಲ್ಕು ಮಹತ್ವದ ಬದಲಾವಣೆಗಳು ಸಂಭವಿಸುವವು.

## ಸ್ಥಿತಿಯ ಒಂದು ಬದಲಾವಣೆ

ಬಾಪ್ತಿಸ್ಮಕ್ಕೆ ಬರುವದರಲ್ಲಿ, ನಮ್ಮ ಪಾಪಗಳನ್ನು ಕ್ಷಮಿಸಲಿಕ್ಕೆ ತನ್ನ ಮರಣದಲ್ಲಿ ತನ್ನ ರಕ್ತವನ್ನು ಸುರಿಸಿದ ಮೆಸ್ಸೀಯನಂತೆ ಯೇಸುಕ್ರಿಸ್ತನಲ್ಲಿ ನಂಬಿಕೆಯೊಂದಿಗೆ ನಾವು ಬರತಕ್ಕದ್ದು. ಆತನನ್ನು ನಮ್ಮ ಕರ್ತನಂತೆ ಸ್ವೀಕರಿಸುವದಕ್ಕಾಗಿ ನಮ್ಮ ಹಿಂದಿನ ಜೀವಿತವನ್ನು ಬಿಟ್ಟು ಬಿಡುವದನ್ನು ನಮ್ಮ ಹೃದಯಗಳಲ್ಲಿ ನಿರ್ಣಯಿಸತಕ್ಕದ್ದು. ನಾವು ಇದನ್ನು ಮಾಡುವಾಗ, ಆತನು ನಮ್ಮ ಸ್ಥಿತಿಯನ್ನು ಬದಲಾಯಿಸುವನು (1) ತಪ್ಪಿ ಹೋಗಿದ್ದರಿಂದ ರಕ್ಷಿಸಲ್ಪಟ್ಟದ್ದಕ್ಕೆ (ಮಾರ್ಕ 16:16; 1 ಪೇತ್ರ 3:21), (2) ಪಾಪಗಳಿಂದ ಭಾರಹೊತ್ತಿರುವದರಿಂದ ನಮ್ಮ ಪಾಪಗಳಿಂದ ಶುದ್ಧೀಕರಿಸಲ್ಪಟ್ಟದ್ದಕ್ಕೆ (ಅಪೊಸ್ತಲರ ಕೃತ್ಯಗಳು 22:16), ಮತ್ತು (3) ನಮ್ಮ ಪಾಪಗಳ ಅಪರಾಧಿಗಳಾಗಿರುವದರಿಂದ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದಕ್ಕೆ (ಅಪೊಸ್ತಲರ ಕೃತ್ಯಗಳು 2:38; ಕಲೊಸ್ಸೆ 2:12, 13) ಬದಲಾಯಿಸಲ್ಪಡುವೆವು. ಇವುಗಳು ಮೂರು ಭಿನ್ನವಾದ ಬದಲಾವಣೆಗಳಲ್ಲ, ಆದರೆ ಒಂದೇ ಬದಲಾವಣೆಗೆ ಸೂಚನೆಗಳಾಗಿವೆ. ಈ ಬದಲಾವಣೆಯು ಕ್ರೈಸ್ತನಲ್ಲದವನು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಟ್ಟು ಒಬ್ಬ ಕ್ರೈಸ್ತನಾಗುವಾಗ ಸಂಭವಿಸುತ್ತದೆ.

## ಸ್ಥಳದ ಒಂದು ಬದಲಾವಣೆ

ನಾವು ಬಾಪ್ತಿಸ್ಮ ಹೊಂದುವಾಗ, ನಮಗೆ ಸರಿಯಾದ ಆತ್ಮಿಕ ಒಳಗೊಳ್ಳುವಿಕೆ ಇರುವುದಾದರೆ, ನಾವು ಯೇಸುವಿನಿಂದ ಬೇರೆಯಾದ ಸ್ಥಳದಲ್ಲಿ, ಕ್ರಿಸ್ತನ ಹೊರಗೆ ಇನ್ನು ಮುಂದೆ ಇರಲಾರೆವು. ಎಫೆಸದಲ್ಲಿಯ ಕ್ರೈಸ್ತರಿಗೆ ಪೌಲನು ಹೀಗೆ ಹೇಳಿದನು, "ನೀವು ಪೂರ್ವಕಾಲದಲ್ಲಿ ಕ್ರಿಸ್ತನನ್ನು ಸೇರದವರಾಗಿದ್ದು, ಇಸ್ರಾಯೇಲ್ಯ ಹಕ್ಕಿನಲ್ಲಿ

ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದಿರಿ ..." (ಎಫೆಸ 2:12).

ಕ್ರೈಸ್ತರಾಗುವಲ್ಲಿ, ನಮ್ಮ ಸ್ಥಳವು ಬದಲಾಗುತ್ತದೆ - ಯಾಕಂದರೆ ನಾವು ಕ್ರಿಸ್ತನಲ್ಲಿ ಪ್ರವೇಶಿಸುತ್ತೇವೆ. ಅಲ್ಲಿ ನಾವು ಯೇಸುವಿನ ರಕ್ತದಿಂದ ದೇವರ ಬಳಿಗೆ ತರಲ್ಪಡುತ್ತೇವೆ (ಎಫೆಸ 2:11-13). ಯೇಸುವಿನ ಹೊರಗಿರುವದರಿಂದ ಆತನಲ್ಲಿ ಇರುವದಕ್ಕೆ ಸ್ಥಳ ಬದಲಾಯಿಸುವದರಿಂದ (ರೋಮಾಪುರ 6:3; ಗಲಾತ್ಯ 3:27), ಯೇಸುವಿನ ರಕ್ತದಿಂದ ಸಾಧ್ಯವಾಗಿ ಮಾಡಲ್ಪಟ್ಟ ಆಶೀರ್ವಾದಗಳಲ್ಲಿ ಪ್ರವೇಶಿಸುವೆವು. ಆತನಲ್ಲಿ ಆತನ ಮುಖಾಂತರ ವಿಮೋಚನೆಯೂ ನಮ್ಮ ಅಪರಾಧಗಳ ಕ್ಷಮಾಣೆಯೂ ಇರುವುದು (ಎಫೆಸ 1:7; ಕೊಲೊಸ್ಸೆ 1:14). ಕ್ರಿಸ್ತನಲ್ಲಿ ನಾವು ನೂತನ ಸೃಷ್ಟಿಗಳಾಗಿ ಮಾಡಲ್ಪಟ್ಟಿದ್ದೇವೆ (2 ಕೊರಿಂಥ 5:17), ನಾವು ಕೃಪೆಗೆ ಬಾಧ್ಯರಾಗಿದ್ದೇವೆ (ಎಫೆಸ 1:6; 2 ತಿಮೊಥೆ 2:1), ನಾವು ರಕ್ಷಣೆಯನ್ನು ಹೊಂದಿಕೊಳ್ಳುತ್ತೇವೆ (2 ತಿಮೊಥೆ 2:10), ನಿತ್ಯ ಜೀವವನ್ನು ಅನುಭವಿಸುತ್ತೇವೆ (1 ಯೋಹಾನ 5:11), ಮತ್ತು ಎಲ್ಲಾ ಆತ್ಮಿಕ ಆಶೀರ್ವಾದಗಳು ಲಭ್ಯವಿರುತ್ತವೆ (ಎಫೆಸ 1:3).

ಯೇಸುವಿನಲ್ಲಿ ಬಾಪ್ತಿಸ್ಮ ಹೊಂದುವದರಿಂದ, *ಒಂದು ದೇಹವನ್ನು* ಅಂದರೆ ಯೇಸುವಿನಲ್ಲಿರುವ (ರೋಮಾಪುರ 12:5) ಒಂದೇ ದೇಹದಲ್ಲಿ (1 ಕೊರಿಂಥ 12:27), ಕ್ರಿಸ್ತನ ಸಭೆಯಲ್ಲಿ (ಎಫೆಸ 1:22, 23; 5:30; ಕಲೊಸ್ಸೆ 1:18, 24; 3:15) ನಾವು ಪ್ರವೇಶಿಸುತ್ತೇವೆ. ಯೇಸುವು ಒಂದೇ ದೇಹದ (ಎಫೆಸ 5:23), ಸಭೆಯ ರಕ್ಷಕನಾಗಿದ್ದಾನೆ, ನಾವು ಬಾಪ್ತಿಸ್ಮ ಹೊಂದಿದಾಗ ಅದರಲ್ಲಿ ಪ್ರವೇಶಿಸುತ್ತೇವೆ (1 ಕೊರಿಂಥ 12:13).

ಸಭೆಯಲ್ಲಿರುವವರು ಪರಲೋಕದಲ್ಲಿ "ದಾಖಲಿಸಲ್ಪಟ್ಟಿದ್ದಾರೆ" (ಇಬ್ರಿಯ 12:23). ಇದರ ಅರ್ಥ ನಾವು ಪರಲೋಕದೊಳಗೆ ಪ್ರವೇಶಿಸುವೆವು ಯಾಕಂದರೆ ನಮ್ಮ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿರುವವು (ಪ್ರಕಟನೆ 21:27). ಆ ಪುಸ್ತಕದಿಂದ ನಮ್ಮ ಹೆಸರುಗಳು ಅಳಿಸಲ್ಪಡದಂತೆ ನಾವು ಜಯಿಸತಕ್ಕದ್ದು (ಪ್ರಕಟನೆ 3:5). ನಮ್ಮ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಇರದಿದ್ದರೆ, ನಾವು ಬೆಂಕಿಯ ಕೊಳ್ಳದಲ್ಲಿ ಎಸೆಯಲ್ಪಡುವೆವು (ಪ್ರಕಟನೆ 20:15). ಸಭೆಯ ಸದಸ್ಯರಾಗಿ, ನಾವು ಪರಿಪೂರ್ಣರೂ (ಇಬ್ರಿಯ 12:23), ಕಲಂಕವಿಲ್ಲದವರೂ ಮತ್ತು ದೋಷ ರಹಿತರೂ ಆಗಿ ಯೇಸುವಿನ ರಕ್ತದಿಂದ, "ವಾಕ್ಯದೊಂದಿಗೆ ನೀರಿನ ತೊಳೆಯುವಿಕೆಯಿಂದ" ಆಗಿರುವೆವು (ಎಫೆಸ 5:26). ಆದುದರಿಂದ ನಾವು ನಿರ್ದೋಷವುಳ್ಳವರಾಗಿ ಯೇಸುವಿಗೆ ಕೊಡಲ್ಪಡುವೆವು (ಎಪೆಸ 5:27; ಕೊಲೊಸ್ಸೆ 1:19-23).

ಸಭೆಯು ಯೇಸುವಿನ *ರಾಜ್ಯವಾಗಿರುವುದು* (ಮತ್ತಾಯ 16:18, 19); ಅದನ್ನು ಅಲ್ಲಾಡಿಸಲಿಕ್ಕಾಗದು (ಇಬ್ರಿಯ 12:28). ರಾಜ್ಯದ ಸದಸ್ಯರೂ ಮತ್ತು ರಾಜ್ಯದ ಮಕ್ಕಳೂ ಯೇಸುವಿನ ಮತ್ತು ತಂದೆಯ ನಿತ್ಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು (ಮತ್ತಾಯ 13:37-43; 2 ಪೇತ್ರ 1:10, 11). ನಾವು ಆ ರಾಜ್ಯವನ್ನು ನೀರಿನಿಂದಲೂ ಆತ್ಮನಿಂದಲೂ ಜನಿಸುವದರಿಂದ ಪ್ರವೇಶಿಸುವೆವು (ಯೋಹಾನ 3:3-5).

ಸಭೆಯ ಸದಸ್ಯರು *ದೇವರ ಮನೆಯಲ್ಲಿ*, ಆತನ ಕುಟುಂಬದಲ್ಲಿ ಮಕ್ಕಳಾಗಿರುವರು (1 ತಿಮೊಥೆ 3:15). ನಂಬಿಕೆಯ ಮುಖಾಂತರವಾಗಿ ನಾವು ಬಾಪ್ತಿಸ್ಮ ಹೊಂದುವಾಗ ದೇವರ ಮಕ್ಕಳೂ ದೇವರ ಮನೆತನದ ಸದಸ್ಯರೂ ಆಗುವೆವು (ಗಲಾತ್ಯ 3:26, 27). ಮಕ್ಕಳಂತೆ, ನಾವು ದೇವರ ಬಾಧ್ಯಸ್ಥರೂ, ಯೇಸುವಿನ ಜೊತೆ ಬಾಧ್ಯಸ್ಥರೂ ಆಗಿರುವೆವು

(ರೋಮಾಪುರ 8:17; ಗಲಾತ್ಯ 4:7). ಬಾಧ್ಯಸ್ಥರಾಗಿ ನಮ್ಮ ಬಾಧ್ಯಸ್ಥಿಕೆಯು ಪರಲೋಕದಲ್ಲಿ ಒಂದು ನಾಶವಾಗದ ವಾಸಸ್ಥಳವಾಗಿರುವುದು (1 ಪೇತ್ರ 1:3, 4).

ನ್ಯಾಯತೀರ್ವಿಕೆಯು ದೇವರ ಮನೆತನದಿಂದ ಪ್ರಾರಂಭವಾಗುತ್ತದೆ. ಇವರು ಸುವಾರ್ತೆಗೆ ವಿಧೇಯರಾದವರು - ಯಾಕಂದರೆ ಅವರು ಪೇತ್ರನಿಂದ ಸುವಾರ್ತೆಗೆ ವಿಧೇಯರಾಗದವರೊಂದಿಗೆ ವಿರೋಧವಾಗಿ ಇಡಲ್ಪಟ್ಟಿದ್ದಾರೆ (1 ಪೇತ್ರ 4:17). ಸುವಾರ್ತೆಯು ರಕ್ಷಿಸಲಿಕ್ಕೆ ದೇವರ ಶಕ್ತಿಯಾಗಿದೆ (ರೋಮಾಪುರ 1:16), ಇದರ ಅರ್ಥ ದೇವರ ಮನೆತನದಲ್ಲಿರುವವರು, ಸಭೆಯಲ್ಲಿರುವವರು, ರಕ್ಷಿಸಲ್ಪಟ್ಟವರಾಗಿದ್ದಾರೆ, ನಾವು ಸುವಾರ್ತೆಗೆ ವಿಧೇಯರಾಗದಿದ್ದರೆ, ನಾವು "ಕರ್ತನ ಸಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವೆವು" (2 ಥೆಸಲೊನೀಕ 1:9).

ಸಭೆಯು "*ಹಿಂಡು*" ಎಂದೂ ಕರೆಯಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 20:28). ಯೇಸುವು ತನ್ನ ಹಿಂಡಿನಲ್ಲಿಯ ಕುರಿಗಳಿಗಾಗಿ ತನ್ನ ಪ್ರಾಣವನ್ನು ಕೊಟ್ಟನು (ಯೋಹಾನ 10:11, 15). ಆತನ ಕುರಿಯಂತೆ ನಮ್ಮನ್ನು ನಾವು ಆತನಿಗೆ ಅಧೀನರಾಗಿರುವೆವು (ಯೋಹಾನ 10:27; ಎಫೆಸ 5:24). ನಾವು ಆತನನ್ನು ಹಿಂಬಾಲಿಸುವದರಿಂದ ನಮಗೆ ನಿತ್ಯಜೀವವು ಕೊಡಲ್ಪಡುವುದು (ಯೋಹಾನ 10:27, 28). ಸ್ವಾಭಾವಿಕ ಜಗತ್ತಿನಲ್ಲಿ, ಕುರಿಗಳು ಒಂದು ಹಿಂಡಿನಲ್ಲಿ ಜನಿಸುವವು; ಹಾಗೆಯೇ ಆತ್ಮಿಕ ಜಗತ್ತಿನಲ್ಲಿ, ಆತ್ಮಿಕ ಜನನವು (ಯೋಹಾನ 3:3-5) ಯೇಸುವಿನ ಹಿಂಡಿನ ಸದಸ್ಯರನ್ನಾಗಿ ನಮ್ಮನ್ನು ಮಾಡಲು ಅಗತ್ಯವಿರುತ್ತದೆ.

ನಾವು ಎಲ್ಲಿ ಇರುವೆವೋ ಅದು ದೊಡ್ಡ ವ್ಯತ್ಯಾಸವನ್ನು ಮಾಡುತ್ತದೆ. ಕ್ರಿಸ್ತನ ಸಭೆಯಾಗಿರುವ ಆತನ ಒಂದೇ ದೇಹದಲ್ಲಿ - ಯೇಸುವಿನ ರಾಜ್ಯ, ದೇವರ ಕುಟುಂಬ, ಮತ್ತು ಯೇಸುವಿನ ಹಿಂಡಿನಲ್ಲಿ ನಾವು ಇರದಿದ್ದರೆ, ನಾವು ಪರಲೋಕವನ್ನು ಪ್ರವೇಶಿಸಲಾರೆವು. ನಮ್ಮ ಬಾಪ್ತಿಸ್ಮವು, ನಮ್ಮನ್ನು ಕ್ರಿಸ್ತನ ಸಭೆಯೊಳಗೆ ಇಡುವ ಸ್ಥಳದ ಬದಲಾವಣೆಯನ್ನು ಸಾಧ್ಯವಾಗಿ ಮಾಡುತ್ತದೆ.

## ದಾಸತ್ವದ ಒಂದು ಬದಲಾವಣೆ

ಬಾಪ್ತಿಸ್ಮದಲ್ಲಿ ನಮ್ಮ ಆತ್ಮಿಕ ಒಳಗೊಳ್ಳುವಿಕೆಯ ಪರಿಣಾಮವು ಪಾಪಕ್ಕೆ ದಾಸರಾಗಿರುವ ಜೀವಿತವನ್ನು ಬಿಟ್ಟು ಬಿಡುತ್ತೇವೆ ಮತ್ತು ನೀತಿಗೆ ಸೇವೆಮಾಡುವ ನೂತನ ಜೀವಿತದೊಳಗೆ ಪ್ರವೇಶಿಸುತ್ತೇವೆ (ರೋಮಾಪುರ 6:16-18). ಪಾಪವು ನಮ್ಮನ್ನು ದಾಸರನ್ನಾಗಿ ಮಾಡಿಕೊಳ್ಳುತ್ತದೆ ಹಾಗೂ ಪಾಪದ ಸೇವಕರನ್ನಾಗಿ ಮಾಡುತ್ತದೆ (ಯೋಹಾನ 8:34; ರೋಮಾಪುರ 6:16; 2 ಪೇತ್ರ 2:19). ನಮಗೆ ಕೊಡಲ್ಪಟ್ಟ ಬೋಧನೆಯನ್ನು ಹೃದಯದಿಂದ ನಂಬುವದರಿಂದ ನಾವು ಬದಲಾಯಿಸಲ್ಪಡದಿದ್ದರೆ (ರೋಮಾಪುರ 6:17, 18), ನಾವು ಪಾಪದ ದಾಸರಾಗಿಯೇ ಉಳಿಯುವೆವು. ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ನಾವು ಆತ್ಮಿಕವಾಗಿ ಸಾಯುವಾಗ ಮಾತ್ರವೇ ಬದಲಾವಣೆಯಾಗುವುದು (ರೋಮಾಪುರ 6:3, 4). ಆ ಹಂತದಲ್ಲಿ, ಹಳೇ ಜೀವಿತವು ಶಿಲುಬೆಗೆ ಹಾಕಲ್ಪಡುವುದು, ಪಾಪದ ದೇಹವು ತೆಗೆದು ಹಾಲ್ಪಡುವುದು ಮತ್ತು ನಾವು ಇನ್ನು ಪಾಪದ ಸೇವಕರಾಗಿರುವದಿಲ್ಲ (ರೋಮಾಪುರ 6:4-6). ಬಾಪ್ತಿಸ್ಮದಲ್ಲಿ ಪಾಪಕ್ಕೆ ಸಾಯುವದರ ಮುಖಾಂತರ, ಪಾಪದ ದೊರೆತನ ಮಾಡುವ ಬಲದಿಂದ ನಾವು ಬಿಡುಗಡೆ ಹೊಂದುವೆವು (ರೋಮಾಪುರ 6:7, 18).

## ಸಂಬಂಧಗಳ ಒಂದು ಬದಲಾವಣೆ

ನಾವು ಬಾಪ್ತಿಸ್ಮ ಹೊಂದುವಾಗ, ನಮ್ಮ ಸಂಬಂಧಗಳು ಬದಲಾಗುವವು. ನಾವು ಬಾಪ್ತಿಸ್ಮ ಹೊಂದುವ ಮತ್ತು ಯೇಸುವಿನ ರಾಜ್ಯದಲ್ಲಿ ವರ್ಗಾಯಿಸಲ್ಪಡುವ ಮೊದಲು, ನಾವು ಕತ್ತಲೆಯಲ್ಲಿ ಮತ್ತು ಸೈತಾನನ ಆಡಳಿತೆಯಲ್ಲಿ ಇದ್ದೆವು (ಅಪೊಸ್ತಲರ ಕೃತ್ಯಗಳು 26:18; ಕೊಲೊಸ್ಸೆ 1:13). ಆ ರೀತಿಯಲ್ಲಿ ನಾವು ಭಾವಿಸದೇ ಇರಬಹುದು, ಮತ್ತು ನಾವು ಅದನ್ನು ಒಪ್ಪಿಕೊಳ್ಳದಿರಬಹುದು - ಆದರೆ ಅದು ಸತ್ಯದ ಸಂಗತಿಯಾಗಿರುವುದು. ಸೈತಾನನು ಅಪೇಕ್ಷಿಸುವದನ್ನು ನಾವು ಮಾಡುವವರೆಗೆ (ಯೋಹಾನ 8:44), ನಾವು ಸೈತಾನನ ಮಕ್ಕಳಾಗಿರುವೆವು (1 ಯೋಹಾನ 3:7, 8, 10). ನಮ್ಮ ನಂಬಿಕೆಯು ಸೈತಾನನ ಮಕ್ಕಳಾಗಿರುವದರಿಂದ ದೇವರ ಮಕ್ಕಳಾಗುವದಕ್ಕೆ ಬದಲಾಯಿಸಲು ನಡಿಸುವುದು (ಗಲಾತ್ಯ 3:26, 27).

ದೇವರ ರಾಜ್ಯದ ಮಕ್ಕಳಂತೆ, ನಾವು ಇನ್ನೂ ಈ ಲೋಕದಲ್ಲಿ ಸೈತಾನನ ಮಕ್ಕಳ ಮಧ್ಯದಲ್ಲಿ ವಾಸಿಸುತ್ತಿರುವೆವು (ಮತ್ತಾಯ 13:37-39). ದೇವದೂತರು ಸುಗ್ಗಿ ಮಾಡಲು ಕಳುಹಿಸಲ್ಪಡುವಾಗ ರಾಜ್ಯದ ಮಕ್ಕಳು ಸೈತಾನನ ಮಕ್ಕಳಿಂದ ಬೇರ್ಪಡಿಸಲ್ಪಡುವರು. ದುಷ್ಟರು ತಂದೆಯ ರಾಜ್ಯದಲ್ಲಿ ಪ್ರವೇಶಿಸುವ ಬದಲು ಬೆಂಕಿಯೊಳಗೆ ಹಾಕಲ್ಪಡುವರು (ಮತ್ತಾಯ 13:39-43).

ನಾವು ಪಾಪದ ಕತ್ತಲೆಯಲ್ಲಿದ್ದರೆ, ನಾವು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಇರಲಾರೆವು - ಯಾಕಂದರೆ ದೇವರು ಬೆಳಕಾಗಿದ್ದಾನೆ, ಮತ್ತು ಆತನಲ್ಲಿ ಕತ್ತಲೆಯಿರುವದಿಲ್ಲ (1 ಯೋಹಾನ 1:5-7). ಪಾಪವು ದೇವರಿಂದ ನಮ್ಮನ್ನು ಬೇರೆ ಮಾಡುತ್ತದೆ ಮತ್ತು ಆತನೊಂದಿಗೆ ಅನ್ಯೋನ್ಯತೆಯಲ್ಲಿರುವದರಿಂದ ದೂರ ಮಾಡುತ್ತದೆ (ಯೆಶಾಯ 59:1, 2). ಯೇಸುವಿನಿಂದ ಹೊರಗೆ ಇರುವವರು ಆತನಿಂದ ಬೇರ್ಪಡಿಸಲ್ಪಟ್ಟಿರುತ್ತಾರೆ; ಅವರು ದೇವರಿಲ್ಲದವರೂ ಕ್ರಿಸ್ತನಿಲ್ಲದವರೂ ಆಗಿರುವರು (ಎಫೆಸ 2:11, 12). ಬಾಪ್ತಿಸ್ಮ ಹೊಂದುವದರಿಂದ ನಾವು ಯೇಸುವನ್ನು ಪ್ರವೇಶಿಸುವಾಗ (ರೋಮಾಪುರ 6:3; ಗಲಾತ್ಯ 3:27), ಕತ್ತಲೆಯೊಂದಿಗಿನ ನಮ್ಮ ಸಂಬಂಧ ಅಂತ್ಯಗೊಳ್ಳುತ್ತದೆ, ಮತ್ತು ಬೆಳಕಿನೊಂದಿಗೆ ನಮ್ಮ ಸಂಬಂಧವು ಪ್ರಾರಂಭವಾಗುತ್ತದೆ. ಯೇಸುವಿನಲ್ಲಿ ನಾವು ಆತನ ರಕ್ತದಿಂದ ದೇವರ ಸಮೀಪಕ್ಕೆ ತರಲ್ಪಡುತ್ತೇವೆ (ಎಫೆಸ 2:13).

## ಸಾರಾಂಶ

ಬಾಪ್ತಿಸ್ಮ ಹೊಂದುವದರಿಂದ ಆಗುವ ಲಾಭಗಳನ್ನು ಅರ್ಥಮಾಡಿಕೊಳ್ಳುವಾಗ ಮತ್ತು ದೇವರು ನಿರೀಕ್ಷಿಸುವ ಆತ್ಮಿಕ ಲಾಭಗಳನ್ನು ತಿಳಿದುಕೊಳ್ಳುವಾಗ ನಾವು ಬಾಪ್ತಿಸ್ಮ ಮಾಡಿಸಿಕೊಳ್ಳಬೇಕು. ಈ ಬದಲಾವಣೆಗಳಿಲ್ಲದೆ, ದೇವರ ರಾಜ್ಯದೊಳಗೆ ನಮಗೆ ಪ್ರವೇಶ ಕೊಡುವ ನೂತನ ಜನನವನ್ನು ನಾವು ಹೊಂದಿಕೊಳ್ಳಲಾರೆವು (ಯೋಹಾನ 3:3-5).

© 2009 Truth for Today